<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

**ಸಿ.ಸಿ. ಸಂಖ್ಯೆಃ 291/2025**

**ಸಾಕ್ಷಿಯನ್ನು ದಿಃ 09.03.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಭಾಗ್ಯಮ್ಮ | ಸಿಡಬ್ಲ್ಯೂಃ 3 | ಪಿಡಬ್ಲ್ಯೂಃ 3 |
| ಗಂಡನ ಹೆಸರು | ಮಹದೇವ ಬೋವಿ | | |
| ವಯಸ್ಸು | 48 ವರ್ಷ | | |
| ಕೆಲಸ | ಕೂಲಿ. | | |
| ವಾಸಸ್ಥಳ | ಬೋವಿ ಕಾಲೋನಿ ,<br>ಹುಣಸೂರು. | | |

## <u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>

ಚಾಸಾ–1 ನನ್ನ ಮಗಳು, ಚಾಸಾ–2 ನನ್ನ ಗಂಡ , ಚಾಸಾ–4 ನನ್ನ ಮಗ , ಚಾಸಾ–5 ಮತ್ತು 6 ಗೊತ್ತು , ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. 1ನೇ ಆರೋಪಿ ನನ್ನ ಅಳಿಯ. 2 ಮತ್ತು 3ನೇ ಆರೋಪಿತರು ನನ್ನ ಅಳಿಯ ತಂದೆ ತಾಯಿ, 4ನೇ ಆರೋಪಿ ನನ್ನ ಅಳಿಯನ ಅಕ್ಕ , 5ನೇ ಆರೋಪಿ 4ನೇ ಆರೋಪಿಯ ಗಂಡ. 1ನೇ ಆರೋಪಿ ಮತ್ತು ಚಾಸಾ–1 ರವರ ಮದುವೆ 22.01.2021 ರಂದು ಬಿಳಿಕೆರೆಯ ಮಲ್ಲಿನಾಥಪುರದಲ್ಲಿರುವ ಮಹದೇಶ್ವರ ದೇವಸ್ಥಾನದಲ್ಲಿ ನನ್ನ ಹಾಗೂ ಚಾಸಾ–3 ರಿಂದ 6 ರವರ ಸಮಕ್ಷಮ ನಡೆದಿತ್ತು. ನಂತರ ಚಾಸಾ–1 ರವರು ಆರೋಪಿತರ ಮನೆಯಿರುವ ಯಳಚಿಹಳ್ಳಿಯಲ್ಲಿ ವಾಸಮಾಡಲು ಪ್ರಾರಂಭಿಸಿದರು. ಆರೋಪಿತರು ಚಾಸಾ–1 ರವರಿಗೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡಿಲ್ಲ, ಅವಾಚ ಶಬ್ಧಗಳಿಂದ ಬೈದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ. ನಾನು ಪೊಲೀಸರ ಮುಂದೆ ಈ ಬಗ್ಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**<u>ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ</u>**

ಮದುವೆಯಾದ 2 ವರ್ಷ ಚಾಸಾ-1 ರವರನ್ನು ಆರೋಪಿತರು ಚೆನ್ನಾಗಿ ನೋಡಿಕೊಂಡಿದ್ದು , ನಂತರ ವಿನಃ ಕಾರಣ ಆಕೆಯ ಮೇಲೆ ಜಗಳ ತೆಗೆದು ನೀನು ಚೆನ್ನಾಗಿಲ್ಲ , ಸರಿಯಾಗಿ ಕೆಲಸ ಮಾಡುವುದಿಲ್ಲ , ನಿನ್ನ ಬದಲು ಬೇರೆಯವರನ್ನು ಮದುವೆಯಾಗಿದ್ದರೆ ಹೆಚ್ಚಿನ ವರದಕ್ಷಿಣೆ ಸಿಗುತ್ತಿತ್ತು ಎಂದು ಹೀಯಾಳಿಸಿ ಮಾತನಾಡುತ್ತಿದ್ದರು ಎಂದರೆ ಸರಿಯಲ್ಲ. 1 ರಿಂದ 3ನೇ ಆರೋಪಿತರು ಚಾಸಾ-1 ರವರಿಗೆ ಹೆಚ್ಚಿನ ಕೆಲಸ ಮಾಡುವಂತೆ ಒತ್ತಡ ಹಾಕಿ ಯಾವುದೇ ಆರೈಕೆ ಯೋಗಕ್ಷೇಮ ನೋಡದೇ ಕಿರುಕುಳ ನೀಡುತ್ತಿದ್ದರು ಎಂದರೆ ಸರಿಯಲ್ಲ. 1ನೇ ಆರೋಪಿಯ ಮನೆಯ ಪಕ್ಕದಲ್ಲೇ ಇರುವ 4 ಮತ್ತು 5ನೇ ಆರೋಪಿತರು ಹಾಗೇ ಬಂದು ಚಾಸಾ-1ರವರಿಗೆ ಕಿರುಕುಳ ನೀಡುತ್ತಿದ್ದರು ಎಂದರೆ ಸರಿಯಲ್ಲ, ಆ ಬಗ್ಗೆ ಚಾಸಾ-1ರವರು ಪ್ರಶ್ನೆ ಮಾಡಿದರೆ ನಾವು ಇರುವುದೇ ಹೀಗೆ ಬೇಕಾದರೆ ಇರು ಬೇಡವಾದರೆ ಹೋಗು ಎಂದು ಗಲಾಟೆ ಮಾಡುತ್ತಿದ್ದರು ಎಂದರೆ ಸರಿಯಲ್ಲ, ಆರೋಪಿತರೆಲ್ಲರೂ ಚಾಸಾ-1 ರವರಿಗೆ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡುತ್ತಾ ತೊಂದರೆ ಕೊಡುತ್ತಿದ್ದರು ಎಂದರೆ ಸರಿಯಲ್ಲ, ಚಾಸಾ-1 ಮುಂದೆ ಸರಿಹೋಗಬಹುದೆಂಬ ಭರವಸೆಯಿಂದ ಆರೋಪಿತರ ಕಿರುಕುಳವನ್ನು ಸಹಿಸಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ, ಚಾಸಾ-1 ರವರಿಗೆ 2 ವರ್ಷವಾದರೂ ಮಕ್ಕಳಾಗಾದ ಕಾರಣ ಅದೇ ವಿಚಾರ ನೆಪ ಮಾಡಿಕೊಂಡು ಚಾಸಾ-1 ರವರಿಗೆ ಹಿಂಸಿಸುತ್ತಿದ್ದರು ಎಂದರೆ ಸರಿಯಲ್ಲ, ಈ ವಿಚಾರವನ್ನು ಚಾಸಾ-1 ತವರು ಮನೆಯಲ್ಲಿ ಹೇಳಿದಾಗ ಚಾಸಾ-2 , ಚಾಸಾ-5 ಮತ್ತು 6 ರವರು ಆರೋಪಿತರ ಜೊತೆ ಪಂಚಾಯಿತಿ ಮಾಡಿದರು ಯಾವುದೇ ಪ್ರಯೋಜನವಾಗಿಲ್ಲ ಎಂದರೆ ಸರಿಯಲ್ಲ.

ದಿನಾಂಕಃ 02.12.2022 ರಂದು ಬೆಳಿಗ್ಗೆ 10.00 ಗಂಟೆಗೆ ಚಾಸಾ-1 ರವರು ಗಂಡನ ಮನೆಯಲ್ಲಿದ್ದಾಗ ಆರೋಪಿತರು ವಿನಾ ಕಾರಣ ಜಗಳ ತೆಗೆದು ಇವಳಿಗೆ ಎಷ್ಟೇ ತೊಂದರೆ ಕೊಟ್ಟರು ಮನೆಯನ್ನು ಬಿಟ್ಟು ಹೋಗುವುದಿಲ್ಲ, ಬೇವರಿಸಿ ಮುಂಡೆ , ಲೋಫರ್ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಮಾಡಿ ಬಿಸಾಕಬೇಕು ಎಂದು ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಈ ವಿಷಯವನ್ನು ಚಾಸಾ-

2ರವರು ತಿಳಿಸಿದ್ದು ಅದೇ ದಿನ ಸಂಜೆ ಚಾಸಾ-2ರವರು ಚಾಸಾ-1ರವರ ಗಂಡನ ಮನೆಗೆ ಬಂದಾಗ ಚಾಸಾ-2 ರವರಿಗೂ ಕೂಡ ಆರೋಪಿತರು ಬೈದರು ಎಂದರೆ ಸರಿಯಲ್ಲ, ನಂತರ ಚಾಸಾ-2 ಮತ್ತು ಚಾಸಾ-1 ರವರು ಹುಣಸೂರಿನ ನಮ್ಮ ಮನೆಗೆ ಬಂದರು ಎಂದರೆ ಸರಿಯಲ್ಲ, 05.12.2022 ರಂದು ಚಾಸಾ-1ನಮ್ಮ ಮನೆಯಲ್ಲಿದ್ದಾಗ ಸಂಜೆ 4.00 ಗಂಟೆಗೆ ಆರೋಪಿತರು ಬಂದು ಮನೆ ಬಿಟ್ಟು ಏಕೆ ಹೋಗಿದ್ದೀಯಾ , ಮನೆ ಕೆಲಸ ಯಾರು ಮಾಡುತ್ತಾರೆ ಎಂದು ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ನೀನು ಬರದೇ ಇದ್ದರೆ ಕೊಲೆ ಮಾಡುವುದಾಗಿ ಗಲಾಟೆ ಮಾಡಿದರು ಎಂದರೆ ಸರಿಯಲ್ಲ. ಅಷ್ಟರಲ್ಲಿ ಚಾಸಾ-2 ಸಮಾಧಾನ ಪಡಿಸಿ ಆರೋಪಿತರನ್ನು ಕಳುಹಿಸಿದರು ಎಂದರೆ ಸರಿಯಲ್ಲ, ನಂತರ ಮುಂದೆ ಚಾಸಾ-1ರವರ ಸಂಸಾರ ಸರಿಹೋಗಬಹುದೆಂದು ತನ್ನನ್ನು ಕರೆದುಕೊಂಡು ಹೋಗಬಹುದೆಂದು ಕಾದು ಈ ಹಿಂದೆ ದಿನಾಂಕಃ 04.11.2024ರಂದು ದೂರು ನೀಡಿದ್ದರೂ ಸಹ ಆರೋಪಿತರು ಬರದೇ ಇದ್ದಾಗ ಕಾದು ದೂರನ್ನು ದಿನಾಂಕಃ 11.11.2024 ರಂದು ಮೈಸೂರಿನ ಮಹಿಳಾ ಪೊಲೀಸ್ ಠಾಣೆಗೆ ನೀಡಿದ್ದಾರೆ ಎಂದರೆ ಸರಿಯಲ್ಲ.

ಈ ಬಗ್ಗೆ ನಾನು ಈಗ ಓದಿ ಹೇಳಿದಂತೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-12 ಎಂದುಗುರುತಿಸಲಾಯಿತು. ಈಗ ಚಾಸಾ-1ರವರು ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿದ್ದಾರೆ ಎಂದರೆ ಸರಿ. ಚಾಸಾ-1 ಮತ್ತು 1ನೇ ಆರೋಪಿ ಅನ್ಯೋನ್ಯತೆಯಿಂದ ಚೆನ್ನಾಗಿದ್ದಾರೆ ಎಂದರೆ ಸರಿ. ಆ ಕಾರಣದಿಂದ ನಿಪಿ-12 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ**

ಆರೋಪಿತರ ಪರ ಪಾಟೀ ಸವಾಲು ಇಲ್ಲ ಎನ್ನುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.